ಮುಖ್ಯ ರಸ್ತೆಯನ್ನು ಸಿಮೆಂಟ್ ರಸ್ತೆಯನ್ನಾಗಿ ಮಾಡಲಾಗಿದೆ. ಹೊಸನಗರ ತಾಲ್ಲೂಕಿನಲ್ಲಿ 167.83 ಕಿಮೀ ರಾಜ್ಯ ಹೆದ್ದಾರಿ ಮತ್ತು 218.50 ಕಿಮೀ ಜಿಲ್ಲಾ ಮುಖ್ಯ ರಸ್ತೆ ಡಾಂಬರೀಕರಣವಾಗಿರುತ್ತದೆ. ಹೋಬಳಿವಾರು ವಿವರಗಳನ್ನು ಅನುಬಂಧ–1 ರಲ್ಲಿ ಸಲ್ಲಿಸಲಾಗಿದೆ.

ಇ) ಸಾಗರ ತಾಲ್ಲೂಕಿನಲ್ಲಿ 19.75 ಕಿಮೀ ಜಿಲ್ಲಾ ಮುಖ್ಯ ರಸ್ತೆ ಹಾಗೂ ಹೊಸನಗರ ತಾಲ್ಲೂಕಿನಲ್ಲಿ 19.80 ಕಿಮೀ ಜಿಲ್ಲೆ ಮುಖ್ಯ ರಸ್ತೆ ಜೆಲ್ಲಿ ರಸ್ತೆಯಾಗಿರುತ್ತದೆ. ಹೋಬಳಿವಾರು ವಿವರಗಳನ್ನು ಅನುಬಂಧ–1 ರಲ್ಲಿ ಸಲ್ಲಿಸಲಾಗಿದೆ.

ಈ) ಸಾಗರ, ಹೊಸನಗರ ತಾಲ್ಲೂಕಿಗೆ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಸೇತುವೆ ಮಾಡಲು 2008–09, 2009–10, 2010–11, 2011–12ನೇ ಸಾಲಿನಲ್ಲಿ ಮಾಡಲಾದ ವೆಚ್ಚ ಹೋಬಳಿವಾರು ವಿವರಗಳನ್ನು ಅನುಬಂಧ–2 ರಲ್ಲಿ ಸಲ್ಲಿಸಲಾಗಿದೆ.

ಅಭಿವೃದ್ಧಿ ಯೋಜನೆಗಳು

254 (466) ಶ್ರೀ ಎನ್.ಎ. ಹ್ಯಾರಿಸ್ (ಶಾಂತಿನಗರ) :– ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ತೋಟಗಾರಿಕೆಗೆ ಒಳಪಟ್ಟಂತೆ ಗುರುತಿಸಲಾಗಿರುವ ಪ್ರದೇಶಗಳ ಪ್ರಮಾಣ ಎಷ್ಟು ; ತೋಟಗಾರಿಕೆ ವಲಯದ ವಾರ್ಷಿಕ ಸರಾಸರಿ ಉತ್ಪಾದನೆ ಪ್ರಮಾಣ ಎಷ್ಟು ;

ಆ) ತೋಟಗಾರಿಕೆಯನ್ನು ರಾಜ್ಯದಾದ್ಯಂತ ಅಭಿವೃದ್ಧಿ ಪಡಿಸಲು ಸರ್ಕಾರದ ಪೂರಕ ಮತ್ತು ಪ್ರೋತ್ಸಾಹಕ ಯೋಜನೆಗಳು ಯಾವುವು.

ಇ) ರಾಜ್ಯದಿಂದ ರಫ್ತು ಮಾಡಲಾಗುತ್ತಿರುವ ಪುಷ್ಪ, ಮಾವು, ದ್ರಾಕ್ಷಿ, ಮೆಣಸು, ಗೋಡಂಬಿ ಈರುಳ್ಳಿ, ಮೆಣಸಿನಕಾಯಿ ಮುಂತಾದ ತೋಟಗಾರಿಕೆ ಬೆಳೆಗಳ ಪ್ರಮಾಣ ಮತ್ತು ಗುರಿ–ಸಾಧನೆಗಳ ಕುರಿತಾದ ವಿವರ ಒದಗಿಸುವುದು.

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) ರಾಜ್ಯದಲ್ಲಿ ತೋಟಗಾರಿಕೆಗೆ ಒಳಪಟ್ಟಂತೆ ಅಂದಾಜು 19.29ಲಕ್ಷ ಹೆಕ್ಟೇರ್‌ಗಳ

(2010–11) ಪ್ರದೇಶ ವಿಸ್ತೀರ್ಣವು ಇರುತ್ತದೆ (ಅಂದರೆ ಸಾಗುವಳಿಯಾದ ಒಟ್ಟು ಪ್ರದೇಶದಲ್ಲಿ ಶೇ. 15.31 ರಷ್ಟು).

ತೋಟಗಾರಿಕೆ ವಲಯದ ವಾರ್ಷಿಕ ಸರಾಸರಿ ಉತ್ಪಾದನೆ ಪ್ರಮಾಣ 149.93 ಲಕ್ಷ ಮೆ.ಟನ್ ಗಳು.

In the State an estimated area of 19.29 lakh hectare (2010-11) has been covered under Horticulture (15.31% of total cultivated area).

Avarage annual production of Horticulture crops is 149.93 lakh M. tons.

ಆ) ತೋಟಗಾರಿಕೆಯನ್ನು ರಾಜ್ಯಾದಾದ್ಯಂತ ಅಭಿವೃದ್ಧಿಪಡಿಸಲು ಸರ್ಕಾರದ ಪೂರಕ ಮತ್ತು ಪ್ರೋತ್ಸಾಹಕ ಯೋಜನೆಗಳ ವಿವರಗಳು ಈ ಕೆಳಕಂಡಂತಿದೆ.

Following are the schemes which are supplimental/complimentary for development of horticulture in the State.

ಅ) ರಾಜ್ಯ ವಲಯ ಯೋಜನೆಗಳು

A) State Sector Schemes

1. ರಾಷ್ಟ್ರೀಯ ತೋಟಗಾರಿಕೆ ಮಿಷನ್

   National Horticulture Mission

2. ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ

   Central Sector Scheme for Drip Irrigation

3. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ

   Oilpalm Cultivation in Potential States

4. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ/ ಅಭಿವೃದ್ಧಿಯ ಸಮಗ್ರ ಬೇಸಾಯದ ಯೋಜನೆ.

Scheme for Integrated Farming in Coconut for Productivity/ Improvement with Coconut Development Board Assistance

5. ಅಡಿಕೆ ಸಂಶೋಧನಾ ಕೇಂದ್ರ – ಶೃಂಗೇರಿ

Arecanut Research Centre - Sringeri

6. ಮಾವು ಅಭಿವೃದ್ಧಿ ಮಂಡಳಿ

Mango Development Board

7. ತೋಟಗಾರಿಕೆಯಲ್ಲಿ ಯಾಂತ್ರೀಕರಣ

Mechanization in Horticulture

8. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ

Development and Maintenance of Farms & Nurseries

9. ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ

Development of Departmental Laboratories

10. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ

Scheme for Integrated Control of Pests & Diseases of Horticultural Crops

11. ತೋಟಗಾರಿಕೆ ಅಭಿವೃದ್ಧಿಗಾಗಿ ಹೊಸ ಅನುಶೋಧನೆಗಳು (ಸುವರ್ಣ ಭೂಮಿ ಯೋಜನೆ)

New Interventions for Horticulture Development (Suvarna Bhoomi Yojane)

12. ಅಂತರ ರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ

International Agricultural Trade Fair

13. ದ್ರಾಕ್ಷಾರಸ ನೀತಿ Wine Policy

14. ಆಲೂಗೆಡ್ಡೆ ಬೆಳೆಗಾಗಿ ಕರ್ನಾಟಕ ತೋಟಗಾರಿಕಾ ಅಭಿವೃದ್ಧಿ ಸಂಸ್ಥೆಯ ಮೂಲಕ ಮಧ್ಯಸ್ಥಿಕೆ ಯೋಜನೆ

Intervention Scheme for Potato Crop through KHDA

15. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ – ತೋಟಗಾರಿಕೆ

Rashtriya Krishi Vikasa Yojane-Horticulture

16. ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರ (ಹಾರ್ಟಿ ಕ್ಲಿನಿಕ್)

Horticulture Information and Service Center (Horti Clinic)

17. ಕ.ತೋ.ಸಂ.ಸಂ.ದ ಮುಖಾಂತರ ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯಗಳ ಸ್ಥಾಪನೆ

Establishment of Integrated Marketing facilities for Horticulture Produce through KHF

18. ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ

Processing and Value Addition of Horticulture produce

19. ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ

Horticulture University, Bagalkot

20. ರಾಷ್ಟ್ರೀಯ ಔಷಧಿ ಬೆಳೆ ಮಿಷನ್

National Medicinal Plant Mission

21. ತೋಟಗಾರಿಕೆ ಕಟ್ಟಡಗಳು

Horticulture Buildings

22. ನಿರ್ದೇಶನ ಮತ್ತು ಆಡಳಿತ

Direction and administration

23. ವಿಸ್ತರಣೆ ಮತ್ತು ತರಬೇತಿ

Extension and training

24. ತೋಟಗಾರಿಕೆ ಉದ್ಯಾನವನಗಳ ಅಭಿವೃದ್ಧಿ

Development of parks and gardens

25. ವಿಧಾನಸೌಧ ಉದ್ಯಾನವನ

Vidhana Soudha Gardens

26. ಜೇನು ಕೃಷಿ ಚಟುವಟಿಕೆ Apiculture activity

ಅ) ಜಿಲ್ಲಾ ವಲಯ ಯೋಜನೆಗಳು

B) District Sector Schemes

1. ತೆಂಗುಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ

   Procurement and maintenance of Coconut nursery

2. ಶೀಥಲ ಗೃಹಗಳ ಸಹಾಯಧನ

   Cold storage subvention scheme

3. ಪ್ರಚಾರ ಮತ್ತು ಸಾಹಿತ್ಯ Publicity and literature
4. ರೈತರಿಗೆ ಸಹಾಯ Assistance to farmers
5. ರೈತರಿಗೆ ತರಬೇತಿ Training to farmers

ಇ) ರಾಜ್ಯದಿಂದ ಸುಮಾರು 5158.66 ಕೋಟಿ ರೂ.ಗಳ ಮೌಲ್ಯದ ಕೃಷಿ ಉತ್ಪನ್ನಗಳು ರಫ್ತಾಗುತ್ತಿವೆ. ಅವುಗಳಲ್ಲಿ ಕೆಳಕಾಣಿಸಿದ ಪ್ರಮುಖ ತೋಟಗಾರಿಕೆ ಬೆಳೆಗಳಿರುತ್ತವೆ ;

In the State, nearly Rs.5158.66 crores worth Agriculture produce is being exported. Among these, major Horticulture produces exported are given below ;

ರೂ.ಕೋಟಿಗಳಲ್ಲಿ Rs. In Crores

ಉತ್ಪನ್ನಗಳು Produces	ರಫ್ತುಮೌಲ್ಯ Export value
ಕಾಫಿ ಉತ್ಪನ್ನಗಳು Coffee products	2184.04
ಗೋಡಂಬಿ Cashew	586.76
ಸಂಬಾರು ಪದಾರ್ಥಗಳು Spices	449.75
ಬೆಂಗಳೂರು ರೋಸ್ ಆನಿಯನ್ Bangalore Rose Onion	90.00
ಗೆರ್ಕಿನ್ಸ್ Gherkins	450.00
ಹೂವುಗಳು Flowers	50.00
ಸಂಸ್ಕರಿಸಿದ ಕೃಷಿ ಪದಾರ್ಥಗಳು Processed Agricultural Products	670.30

ಮಾವು ಸೇರಿದಂತೆ ಹಲವಾರು ತೋಟಗಾರಿಕೆ ಉತ್ಪನ್ನಗಳು ಮುಂಬೈ, ಚೆನ್ನೈ ಮತ್ತು ಇತರೆ ರಾಜ್ಯಗಳ ಮೂಲಕ ಹಾಗೂ ಹೊರ ರಾಜ್ಯದ ವರ್ತಕರ ಮುಖಾಂತರ ರಫ್ತಾಗುತ್ತಿರುವುದರಿಂದ ಮಾಹಿತಿ ಲಭ್ಯವಿರುವುದಿಲ್ಲ.

ಈ ಪದಾರ್ಥಗಳ ರಫ್ತಿಗೆ ಗುರಿಗಳನ್ನು ನಿಗದಿ ಪಡಿಸಿರುವುದಿಲ್ಲ.

ಕೃಷಿ ವಲಯದ ಸಮಗ್ರ ಅಭಿವೃದ್ಧಿ

255 (467) ಶ್ರೀಎನ್.ಎ. ಹ್ಯಾರೀಸ್ (ಶಾಂತಿನಗರ) :– ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೃಷಿ ವಲಯದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು ;

ಆ) ಕೃಷಿಕರಿಗೆ ಅತ್ಯಗತ್ಯ ಮತ್ತು ಸಕಾಲಿಕವಾಗಿ ಬೇಕಾಗಿರುವ ಸಣ್ಣ ನೀರಾವರಿ ವ್ಯವಸ್ಥೆ, ಸುಲಭ ರೀತಿಯ ಸಾಲ ಸೌಲಭ್ಯ ಮತ್ತು ಸಮರ್ಪಕ ವಿದ್ಯುತ್ ಸರಬರಾಜಿಗೆ ಸರ್ಕಾರ ಹಮ್ಮಿಕೊಂಡ ಪರಿಣಾಮಕಾರಿ ಕಾರ್ಯಕ್ರಮಗಳೇನು ?

ಇ) ಬ್ಯಾಂಕುಗಳು ಮತ್ತು ಸಹಕಾರ ಸಂಘಗಳ ಮೂಲಕ ಕೃಷಿಕರಿಗೆ ಸಾಲ ಸೌಲಭ್ಯವನ್ನು ಒದಗಿಸಿಕೊಡುವ ದಿಶೆಯಲ್ಲಿ ಕೃಷಿ ಇಲಾಖೆಯವರ ಗುರಿ ಮತ್ತು ಸಾಧನೆಗಳೇನು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):–

ಅ) ಕೃಷಿ ವಲಯದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಸಹಕಾರ ಇಲಾಖೆ ಮೂಲಕ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭವಾಗಿ ಸಾಲ ನೀಡುವ ಉದ್ದೇಶದಿಂದ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲಗಳನ್ನು ಶೇ.1.00 ರ ಬಡ್ಡಿ ದರದಲ್ಲಿ ಮತ್ತು ರೂ.10.00 ಲಕ್ಷದವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳನ್ನು ಶೇ.3.00 ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಆ) ರೈತರಿಗೆ ಸುಲಭ ರೀತಿಯ ಸಾಲ ಸೌಲಭ್ಯ ನೀಡಲು ರಾಜ್ಯದಲ್ಲಿ 4895 ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಪ್ರತೀ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವ ಪ್ರಕ್ರಿಯ ಜಾರಿಯಲ್ಲಿರುತ್ತದೆ. ಜಿಲ್ಲಾ ಸಹಕಾರ ಬ್ಯಾಂಕುಗಳು ಪ್ರತೀ ವರ್ಷವು ಕನಿಷ್ಠ